ಕೃಷಿ ಉತ್ಪನ್ನಗಳ ಬೆಲೆ ನಿಗದಿಗೊಳಿಸಂವ ಕ್ರಮ

೯೬೫. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೃಷಿ ರ್ಯಾಜಪಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ರೈತ ಬೆಳೆದ ಧಾನ್ಯದ ಬೆಲೆ ನಿಗದಿ ಪಡಿಸಲು ನೇಮಿಸಿದ್ದ ಸಮಿತಿಯು ತನ್ನ ವರದಿಯಲ್ಲಿ ನಮೂದಿಸಿದ ಬೆಲೆಯನ್ನು ಸರ್ಕಾರದವರು ಒಪ್ಪಿದ್ದಾರೆಯೆ ?

ಆ) ಹಾಗಿದ್ದಲ್ಲಿ, ಸಮಿತಿ ನಿಗದಿ ಮಾಡಲು ಸೂಚಿಸಿರುವ ಬೆಲೆ ಏನು ಹಾಗೂ ಸದರಿ ಬೆಲೆಗಳ ಪ್ರಕಾರ ಸರಕಾರ ಖರೀದಿಸಲು ತೀರ್ಮಾನಿಸಿರುವುದೆ. ಹಾಗಿದ್ದಲ್ಲಿ ಎಂದಿನಿಂದ ಹಾಗೂ ಯಾವ ರೀತಿಯಲ್ಲಿ ಖರೀದಿಸಲು ಉದ್ದೇಶಿಸಿದ್ದಾರೆ ?

ಶ್ರೀ ಎಂ.ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು).—

ಅ) ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸಮಿತಿಯು ಶಿಫಾರಸ್ಸು ಮಾಡಿದ ಬೆಲೆಗಳು ಈ ಕೆಳಕಂಡಂತೆ ಇದೆ.–

ಬೆಳೆಗಳು	ದರ ರೂಪಾಯಿಗಳಲ್ಲಿ ಪ್ರತಿ ಕ್ವಿಂಟಾಲ್‌ಗೆ
ಭತ್ತ	೧೯೧–೦೦
ರಾಗಿ	೨೦೫–೦೦
ಜೋಳ	೧೬೧–೨೦
ಜೋಳ (ಹಿಂಗಾರಿ)	೧೯೪–೦೦

ಸಮಿತಿಯ ಶಿಫಾರಸ್ಸುಗಳು ಸರಕಾರದ ಪರಿಶೀಲನೆಯಲ್ಲಿವೆ.

ಶ್ರೀ ಚಂದ್ರಕಾಂತ ಬೆಲ್ಲದ.—ಮಾನ್ಯ ಅಧ್ಯಕ್ಷರೇ, ಬಿತ್ತನೆ ಮಾಡುವ ಮೊದಲೇ ಈ ನಿಗದಿತ ಬೆಲೆಯನ್ನು ಘೋಷಣೆ ಮಾಡಿ ರೈತರಿಗೆ ತಿಳಿಸಬೇಕಾಗಿತ್ತು. ಇಲ್ಲಿಯವರೆಗೂ ಅದನ್ನು ಮಾಡುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಸದಸ್ಯರ ಸಲಹೆ ಬಹಳ ಸೂಕ್ತವಾದುದಾಗಿದೆ. ಅದರ ಬಗ್ಗೆ ಸರ್ಕಾರ ತೀರ್ಮಾನ ಮಾಡಿದೆ.

ಶ್ರೀ ರೇವಣ್ಣಸಿದ್ದಯ್ಯ.—ನೀವು ಕೊಳ್ಳುವ ಬತ್ತವು ಯಾವ ನಮೂನೆ ಬತ್ತ ? ಹೆಚ್ಚಿನ ಬೆಲೆಯದೋ ? ಅಥವಾ ಕಡಿಮೆ ಬೆಲೆಯದೋ ? ಎಂಬುದನ್ನು ತಿಳಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ನಾವು ಕೊಳ್ಳುವ ಬತ್ತ ಎಂದರೆ, ಜಯ ಬತ್ತ ಹಾಗೂ ಹಂಸ ಬತ್ತವನ್ನು ಕೊಳ್ಳುತ್ತೇವೆ. ಇವು ಹೆಚ್ಚು ಇಳುವರಿ ಕೊಡತಕ್ಕಂತ ಬತ್ತವಾಗಿವೆ. ಈ ಬತ್ತಕ್ಕೆ ಕ್ವಿಂಟಾಲ್‌ಗೆ ೧೯೧ ರೂಪಾಯಿಗಳನ್ನು ಕೊಡುತ್ತೇವೆ. ಶೇಕಡ ೧೦ರಷ್ಟು ಲಾಭವನ್ನು ಬೆಳೆಗಾರರಿಗೆ ಕೊಡತಕ್ಕಂತಹ ಉದ್ದೇಶದ ನಡುವೆ ಈ ಬತ್ತವನ್ನು ಕ್ವಿಂಟಾಲ್‌ಗೆ ೧೯೧ ರೂಪಾಯಿಗಳಂತೆ ಕೊಳ್ಳುತ್ತೇವೆ.

ಶ್ರೀ ಚಂದ್ರಕಾಂತ ಬೆಲ್ಲದ.—ಈಗ ನೀವು ಎಷ್ಟು ಧಾನ್ಯವನ್ನು ಕೊಡಬೇಕಾಗ ಬಹುದು? ಯಾವ ಯಾವ ಧಾನ್ಯಕ್ಕೆ ಸರ್ಕಾರ ಎಷ್ಟೆಷ್ಟು ಸಬ್‌ಸೀಡಿ ಕೊಡಬೇಕಾಗಬಹುದು ? ಇದರ ಬಗ್ಗೆ ಯೋಚನೆ ಮಾಡಿದ್ದೀರಾ ? ಮುಂತ್ತು ಲೆಕ್ಕಾ ಹಾಕಿದ್ದೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಈ ಪ್ರಶ್ನೆಗೆ ನೇರವಾಗಿರತಕ್ಕಂತಹ ಉತ್ತರ ಇಲ್ಲ. ಅದಕ್ಕೆ ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಕಳುಹಿಸಿಕೊಡುತ್ತೇನೆ. ಬೆಳೆಗಾರನಿಗೆ ಅನ್ಯಾಯವಾಗಬಾರದು ಎನ್ನುವ ಕಾರಣದಿಂದ ನಾವು ಮಾಡುತ್ತಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು ಕೇಳಿರುವ ಈ ಪ್ರಶ್ನೆಗೆ ಇಲ್ಲಿ ಉತ್ತರ ಕೊಡಲಿಕ್ಕಾಗುವುದಿಲ್ಲ.